ಮೇಲೆ ರಾಜ್ಯದ ಜನತೆಯು
ದರಗಳಿಗೆ ಮೈಸೂರಿನ ರಾಜ್ಯ
ಪ್ರಮುಖ ಶ್ರೀ ಜಯಚಾಮರಾಜ ಒಡೆಯರು
ಅರ್ಪಿಸಿ ವಿದಾಯವನ್ನು

...ಗಿದ್ದೇನೆ. ನನ್ನ ಬಾಲ್ಯದಲ್ಲಿನ ಕ್ರಮ ಶಿಕ್ಷ... ನನ್ನ ವಿದ್ಯಾಭ್ಯಾಸಂಗ ಮತ್ತು ಕಾರ್ಯ... ...ಎಲ್ಲಕ್ಕೂ ನಾನು ... ...ಗೆ ಚಿರ... ...ಯಾಗಿದ್ದೇನೆ. ತಾನು ... ...ದೇ... ...ನನ್ನ ಸತತ ಪ್ರಾರ್ಥನೆಯೇನೆಂದರೆ ಮೈ... ಜನತೆಯನ್ನು ಸಂತೋಷ ಮತ್ತು ... ...ತ್ತು ದೇವರು ಸಲಹಲಿ" ಎಂಬುದಾಗಿ ... ಹೇಳಿದರು.

ಮೈಸೂರಿನ ಆರ್ಥಿಕ ಪ್ರಗತಿಯತ್ತ ಅವರ ...ನೆಯನ್ನು ಕೇಳಲಾಗಿ "ಆ ವಿಚಾರವಾಗಿ ... ಅಭಿವೃದ್ಧಿಯಾಗಬೇಕಾಗಿದೆ ಅ... ...ಗೆಲ್ಲಾ ಸಹನೆಯಿಂದ ಯೋಚಿಸಬೇಕಾಗಿದೆ ...ಅವರು.

...ಸೂರಿನಲ್ಲಿ ದಸರಾ ಸಮಾರಂಭದ ವಿಚಾರ ... ಹಾಕಿದ ಪ್ರಶ್ನೆಗುತ್ತರವಾಗಿ, "ಪಂಥೀಯ ...ಕಲಾಪಗಳು—ಇದರಲ್ಲಿ ದಸರಾ ಸಮ... ದರ್ಬಾರು ಕೂಡಾ ಅಡಕವಾಗಿದೆ—ಮು... ...ಹಮೀ ಪೂಜಾ ಕಾರ್ಯಕಲಾಪಗಳೂ ...ಪ್ರತಿಯೇ ಇನ್ನೂ ನೆರವೇರಿಸಲ್ಪಡುವು... ಬೇರೆ ಕೆಲ ಸಂಭ್ರಮಯುಕ್ತ ಹಬ್ಬಗಳು ...ಲಿರುವವೋ ಅದನ್ನು ಕಾದು ನೋಡ... ...ಕಾಗಿದೆ" ಎಂದು ಹೇಳಿದರು.

...ಸೂರು ಜನತೆಗೆ ಸಂದೇಶವೀಯುತ್ತಾ, ...ರು ಮೈಸೂರಿನ ಜನತೆಗೆ ಒಳ್ಳೆಯದನ್ನೇ ...ಲಿ" ಎಂಬ ಸಂದೇಶ ಪತ್ರಿಕಾಗೋಷ್ಠಿ ... ಪರಿಸಮಾಪ್ತಿ ಹೊಂದಿತು.

...ದ್ರಾಸಿಗೆ ಮೈಸೂರಿನಿಂದ ಒಡೆಯರ್‌ರ ...ಹಾಳೆ ತೆರಳಲಿರುವರು. ಇಂದು ಸಂಜೆ ...ನ್ನು ವಿದಾಯಕೋರುವ ಸಲುವಾಗಿ ಅ... ...ಜ್ಯ ವ್ಯಕ್ತಿಗಳು ಕಾದಿದ್ದು ಒಡೆಯರ್‌ರವ... ...ಚಿಸುತ್ತಿದ್ದರು. (ಪಿ.ಟಿ.ಐ.)

...ಕ್ಷೇತ್ರದ ...

ಜಿಲ್ಲಾಧಿಕಾರಿಗಳ ನಿವಾಸದೆದುರು ಮತ ಪ್ರದರ್ಶನ

ನಡೆಸಲು ಜನಸಂಘದ ವ್ಯವಸ್ಥೆ?

ಮಂಗಳೂರು, ಮೇ 3:- ಸರಕಾರದ ಧೋರಣೆಯಿಂದಾಗಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ಅಕ್ಕಿ ಬೆಲೆಯನ್ನು ಗಮನಿಸಿ ನಗರ ಜನಸಂಘವು ರಾಜ್ಯದ ಮುಖ್ಯ ಮಂತ್ರಿಯವರಿಗೆ, ಆಹಾರ ಮಂತ್ರಿಯವರಿಗೆ ಮತ್ತು ಆಹಾರ ಪೂ... ...ಮಂತ್ರಿಗೆ ತಂತಿ ಮುಖಾಂತರ ... ಕೂಡಲೇ ಅಗ್ಗ ಬೆಲೆಯ ಅಂಗಡಿಯನ್ನು ತೆರೆಯುವಂತೆ ಹಾಗೂ ಅಕ್ಕಿ ಬೆಲೆ ಏರಿಕೆಯನ್ನು ನಿಯಂತ್ರಿಸುವಂತೆ ವಿನಂತಿಸಿರುತ್ತದೆಂದು ತಿಳಿದು ಬಂದಿದೆ.

ಜಿಲ್ಲೆಯ ಅಕ್ಕಿ ಕೊರತೆಯ ಬಗ್ಗೆ ವಿಚಾರ ವಿನಿಮಯ ನಡೆಸಲು ಜನಸಂಘದ ಶಿಷ್ಟ ಮಂಡಲವು ತಾ. 5ರಂದು ಜಿಲ್ಲಾ ಡೆಪ್ಯುಟಿ ಕಮಿಶನರರನ್ನು ಭೇಟಿಯಾಗಲು ಒಪ್ಪಿಗೆ ಪಡೆದಿರುವುದಲ್ಲದೆ, ಈ ಬಗ್ಗೆ ಸರಕಾರವನ್ನು ಎಚ್ಚರಗೊಳಿಸುವ ದೃಷ್ಟಿಯಿಂದ ತಾ. 10-ರಂದು ಬೆಳಗ್ಗೆ ಭಾರತೀಯ ಜನಸಂಘ ಮತ್ತು ಭಾರತೀಯ ಮಜ್ದೂರ್ ಸಂಘದ ಜಂಟಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ನಿವಾಸದೆದುರು ಬೃಹತ್ ಮತಪ್ರದರ್ಶನ ನಡೆ ಏರ್ಪಡಿಸುವುದಾಗಿಯೂ ಹೇಳಲಾಗಿದೆ.

ಬಿರುಗಾಳಿಯಿಂದಾದ ನಷ್ಟಗಳ ವಿವರ

ಕುಂಬಳೆ, ಮೇ 3:- ಕಳೆದ ತಾ. 27ರಂದು ರಾತ್ರಿ ಈ ಪ್ರದೇಶದಲ್ಲುಂಟಾದ ಬಿರುಗಾಳಿಯು ದೆಸೆಯಿಂದ ಹೆಚ್ಚಿನ ನಾಶ ಹಾಗೂ ನಷ್ಟಗಳುಂಟಾಗಿರುವುದಾಗಿ ವರದಿಯಾಗಿದೆ. ಕಾಸರಗೋಡು ತಾಲೂಕಿನ ಮಿಕ್ಕ ಗ್ರಾಮಗಳಲ್ಲೂ ಗಾಳಿಯಿಂದ ಅಪಾರ ಹಾನಿ ಸಂಭವಿಸಿದ ವಾರ್ತೆಗಳಿವೆ.

ಕುಂಬಳೆ–ಕಡಪ್ಪುರಂ ಭಾಗದಲ್ಲಿ 25 ಸಣ್ಣ ಗುಡಿಸಲುಗಳೂ ಪೆರಾಲ್ ಭಾಗದಲ್ಲಿ ಸುಮಾರು 10 ಗುಡಿಸಲುಗಳೂ ಹಾನಿಗೊಳಗಾಗಿವೆ. ಆರಿಕ್ಕಾಡಿ ಗ್ರಾಮದಲ್ಲಿ 6 ಸಣ್ಣ ಗುಡಿಸಲುಗಳು ...

...ನವದೆಹಲಿ, ...ವೃದ ಧುರೀಣರೊ... ...ಪೇರ್ಪಡೆಯಾಗು... ...ಬುದಾಗಿ ಕಾಶ್ಮೀ... ...ಸ್ಪಷ್ಟಪಡಿಸಿದರು.

ಶೇಖ್ ಅಬ್ದುಲ್ಲಾರೊ... ...ಯೋರ್ವನು ಕೇಳಿದ "... ಥಟ್ಟನೆ ಪ್ರತ್ಯುತ್ತರವೀಯು... ...ಲವರಿಗೆ ... ... ಬಹಳ ಸಾಧಾರಣವಾ... ಎಂದೂ ಬರೇ ... ...ಚನೆ ಮಾಡುವುದು ನಿಮಗೆ... ...ಗಿದೆ ಎಂದೂ ಅವರು ...

"ನನ್ನ ಉದ್ದೇಶ ಮತ್ತು... ...ಯುತವಾಗಿವೆ. ಕಾಶ್ಮೀರಿ... ...ಧಾರಾಳವಿದ್ದು, ಭಾರತ ... ಪರಸ್ಪರ ಸೌಹಾರ್ದತೆಯಿ... ...ಗಮ ದಾರಿಯಾಗಿಸಲು ಸಾ... ...ಮುಂದರಿವ ಸೂಚನೆಯನ್ನು... ...ದ್ಧರಿದ್ದಾರೆ. ಮಾಂಸದ ... ...ರು ಅವರಲ್ಲ." ಎಂದು... ...ಡಿದರು.

"ಭಾರತ ಪಾಕಿಸ್ತಾನ–... ...ರೊಬ್ಬರು ಕೆಳ ನಡೆದರೂ... ...ಯು ನಿಲ್ಲದು ಮತ್ತು ... ಶೇಖ್‌ರವರ ಅಭಿಪ್ರಾಯ... ಹಾಗೂ ಪಾಕಿಸ್ತಾನದ ... ಅವಿಭಾಜ್ಯವಾಗಿಯೇ ... ಭಾರತ ಮತ್ತು ಪಾಕಿಸ್... ...ರಸ್ಯ, ಶಾಂತಿ, ಸೌಹಾರ್ದ... ಉಪ ಖಂಡದಲ್ಲಿ ಶಾಂತಿ... ...ಸುವುದೇ ಆದ ಯಾವ ದ... ...ರದ ಜನತೆಗೆ ಅದು ... ...ಖ್‌ರು ನುಡಿದರು.

ಕಾಶ್ಮೀರ...

ಹತ್ತಿರ ಪಶಾಲ
ು ಕೊಡುಗೆಯಲ್ಲಿ
ತ್ತು ಪಾಕಿಸ್ತಾನಗಳ
ರಲು ಆದಾವ ಸು
ವೋ ಆ ಪಥದಿಂದ
ಸ್ವೀಕರಿಸಲೂ ಸಿ
ಣುಕು ಕೇಳುವವ
ಶೇಖ್‌ರವರು ಸು

ಗಳಲ್ಲಿ ಯಾರಾದ
ಾಶ್ಮೀರದ ಭದ್ರತೆ
ಯಿದೆ" ಎಂದರು.
ಮೇರೆಗೆ, ಭಾರತ
ಾ ವಿಚಾರವೂ
ಾಗಿ ಸೂಚಿಸಿ—
ಳೊಳಗೆ ಸಾಮ
ಪ್ಪಂಟಾಗಿಸಿ ಈ
ಸಲು ಪ್ರಯತ್ನಿ
ಾದರೂ ಕಾಶ್ಮೀ
ರುವುದಾಗಿ

ಕ್ಕಿಸಿಕೊಂಡೇ ಇರುವೆನೆಂದು ಶೇಖ್‌ರವರು ವ್ಯಕ್ತಪಡಿಸಿದರು.

(ಪಿ.ಟಿ.ಐ.)

ರಾಜಿಯಲ್ಲಿ ತೀರ್ಮಾನ

ಮಂಗಳೂರು, ಮೇ 3:- ಕುಲಶೇಖರದಲ್ಲಿರುವ ಮೈಸೂರು ಟಿಂಬರ್ ಟ್ರೇಡಿಂಗ್ ಎಂಡ್ ಸೋಮಿಲ್ಸ್ ಇದರ ಕೆಲಸಗಾರರು ಹಾಗೂ ಸದಸ್ಯರಾಗಿರುವ ಕರ್ನಾಟಕ ಮಿಲ್ ವರ್ಕರ್ಸ್ ಯೂನಿಯನಿನ (ಇಂಟಕ್) ಮೂಲಕ ಆಡಳಿತ ಮೆನೇಜ್‌ಮೆಂಟಿನ ಮುಂದೆ 1962-63ನೇ ವರ್ಷದ ಬಾಬ್ತು ಮೂರು ತಿಂಗಳ ... ಬೋನಸ್ಸು ಸಿಗಬೇಕೆಂಬ ಕೇಳಿಕೆಯನ್ನು ... ಅದನ್ನು ಅಸಿಸ್ಟೆಂಟ್ ಲೇಬರ್ ... ರು ತಾ॥ 29ರಂದು ತಮ್ಮ ... ಕನ್ಸಿಲಿಯೇಶನ್ ... ಚರ್ಚೆ ... ಇತ್ತ ...

ರೂ. 1001ರ ನಿಧಿಯ
ನಿಸಲಾಯಿತು. ಅಷ್ಟೇ ಅ
ರ್ವ ಯಂಗ್ ಮೆನ್ಸ್ ಯ
ಡಾ ರೂ. 101ರ ಒಂದು ಪ
ಮೇಳದ ಯಜಮಾನರಾದ
ಡಿ ಶಂಕರ ನಾರ್ಣಪ್ಪಯ್ಯನ
ಕೊಡಿಸಿದರು. ಈ ಯಶಸ್ವಿ
ಶ್ರೀ ಪೊಳಲಿ ಶಂಕರ ನಾರಾ
ಕೀಲ್ ಬಾಲಕೃಷ್ಣ ರಾವ್,
ಶ್ರೀನಿವಾಸ ನಾಯಕ್ ಮೊದ
ಗವಹಿಸಿದ್ದರು.

ರ್ಯ ನಾರಾಯಣ ಅಡಿಗರು
ವಿದರ ಕಾರ್ಯಕ್ಷಮತೆಯನ್ನು
ಾಲ್ಕು ದಶಕಗಳಿಂದ ಅಹೋ

ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ

ಸೀತಾನದಿ ಗಣಪಯ್ಯ ಶೆಟ್ಟಿ.

1964.

ಪ್ರಕಾಶಕರು:
ಎಸ್. ರವೀಂದ್ರನಾಥ ಶೆಟ್ಟಿ,
ಸುಬೋಧ ಸಾಹಿತ್ಯ ಭಂಡಾರ,
ಹಿರಿಯಡಕ, ದ. ಕ.

ಬೆಲೆ: 40 ನಯೇ ಪೈಸೆ.

ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ

ಸೀತಾನದಿ ಗಣಪಯ್ಯ ಶೆಟ್ಟಿ.

1964.

ಪ್ರಕಾಶಕರು:
ಎಸ್. ರವೀಂದ್ರನಾಥ ಶೆಟ್ಟಿ,
ಸುಬೋಧ ಸಾಹಿತ್ಯ ಭಂಡಾರ,
ಹಿರಿಯಡಕ, ದ. ಕ.

ಬೆಲೆ: 40 ನಯೇ ಪೈಸೆ.

ಪಾತ್ರಪರಿಚಯ

ಪುರುಷರು

ದೇವೇಂದ್ರ
ಅಗ್ನಿ
ವಾಯು
ದಾರುಕಾಸುರ
ಬ್ರಹ್ಮ
ಶ್ರೀಮನ್ನಾರಾಯಣ
ಶಿಲ್ಪಿ
ಗುಳಿಗ
ವ್ಯಾಪಾರಿ
ಜಲವರಾಹ
ಅಣ್ಣಯ್ಯ ಬೆಲ್ಲಡ
ಬಪ್ಪ ಬ್ಯಾರಿ
ಉಸ್ಮಾನ್ ಬ್ಯಾರಿ
ಅಗಸ
ಕೋಟಿ-ಚೆನ್ನಯರು
ಕಾಂತಬಾರೆ-ಬುದಾಬಾರೆಯರು
ಅತ್ತೂರು ಉಡುಪರು
ಅಗೋಳಿ ಮಂಜಣ
ಅಗಸ, ತನಿಯ, ಕರಿಯ ಇತ್ಯಾದಿ

ಸ್ತ್ರೀಯರು

ಸಪ್ತದುರ್ಗಿಯರು–
1. ಭಗವತಿ
2. ಪರಮೇಶ್ವರಿ
3. ಅನ್ನಪೂರ್ಣೇಶ್ವರಿ
4. ರಾಜರಾಜೇಶ್ವರಿ
5. ಕಾತ್ಯಾಯಿನಿ
6. ಭ್ರಮರಾಂಬೆ
7. ರಕ್ತೇಶ್ವರಿ

ರಂಭಾಮಣಿ
ಮುದುಕಿ
ಭಾಗೀರಥಿ
ಕಾಳಿ
ಚಿನ್ನಿ (ವೇಶ್ಯೆ)
ಭೂತ ಹಿಡಿದ ಹೆಂಗಸು

ಇತ್ಯಾದಿ

ಶ್ರೀ ಶುಭಮಸ್ತು

ಶ್ರೀ ಗಜಾನನಾಯ ನಮಃ ಶ್ರೀ ಸರಸ್ವತ್ಯೈ ನಮಃ

ಯಕ್ಷಗಾನ

ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮ್ಯೆ

ರಾಗ– ನಾಟಿ –ಝಂಪೆತಾಳ

ಗಜವದನ ಹರಜಾತ । ಸುಜನಜನ ಸಂಪ್ರೀತ । ಭಜಕರನು ಪೊರೆ-ವಾತ । ಭಜಿಪೆ ಗಣನಾಥ ॥ ಜಯ ಜಯತು ಜಯತು ॥೧॥ ನಂಬಿಹೆನು ನಾ ನಿನ್ನ । ತುಂಬುದಯದಿಂದೆನ್ನ । ಬೆಂಬಿಡದೆ ಪೊರೆ ದೇವ । ಅಂಬ ಸಂಭೂತ ॥ ಜಯ ಜಯತು ಜಯತು ॥೨॥ ಸಾತಿಶಯವಹ ನಿನ್ನ । ಪ್ರೀತಿ ತೋರುತಲೆನ್ನ । ಮಾತು ಮತಿ ಕೃತಿಗಳನು । ಭೂತಳದಿ ಮೆರೆಸು ॥ ಜಯ ಜಯತು ಜಯತು ॥೩॥

ಭಾಮಿನಿ

ಶಾರದಾಂಬಿಕೆ ಲಕ್ಷ್ಮಿ ಪಾರ್ವತಿ । ಭಾರತೀ ಶ್ರೀ ತ್ರಿಪುರಸುಂದರಿ । ವಾರಿಜಾಸನೆ ರಾಜರಾಜೇಶ್ವರಿಯೆ ಮೂಕಾಂಬಾ ॥ ವಾರಿಜಾಸನ ಸತಿ ಸರಸ್ವತಿ । ವಾರಿಜೋದ್ಭವೆ ಸರ್ವಮಂಗಳೆ । ತೋರಿ ದಯ ಪೊರೆ ವಾಣಿ ಶ್ರೀ ದುರ್ಗಾ ಪರಮೇಶ್ವರೀ ॥೧॥

ರಾಗ– ಸೌರಾಷ್ಟ್ರ –ತ್ರಿವುಡೆತಾಳ

ಒಂದು ದಿನ ಅಮರೇಂದ್ರ ಸುಮನಸ । ವೃಂದದಿಂದೊಡಗೂಡಿ ನಾಕದಿ । ಚಂದದಿಂದೋಲಗವನೀಯುತ । ಲೆಂದ ಮುದದಿ ॥೧॥ ಕೇಳಿರೈ ದಿಗುಪಾಲ ಮುಖ್ಯರು ನಾಳಿಕೋದ್ಭವ ಸೃಷ್ಟಿಯಲಿ ಸುರ । ಜಾಲವೇ ಅತಿ ಶ್ರೇಷ್ಠವೆನಿಸಿದೆ । ಪೇಳಲೇನು ॥೨॥ ಕಾಮಧೇನುವು ಕಲ್ಪತರು, ಮಣಿ । ಸೋಮಪಾನವು ಕುಲಿಶ ವಾಯುಧ । ಕಾಮಿನಿಯರಪ್ಸರೆಯರತಿಶಯ । ಭೂಮಿ ದಿವವು ॥೩॥ ಭೂಮಿ ಗತಿ ಮಳೆ ಬೆಳೆಯ ಕರುಣಿಪೆ । ಹೋಮ ನೇಮವ ಸತ್ಯ ಧರ್ಮವ । ಭೂಮಿ ಯಲಿ ನೆಲೆಗೊಳಿಸಿ ನೀಡುವೆ ಕಾಮನೆಗಳ ॥೪॥ ಮೂರು ಲೋಕದೊಳೆನ್ನ ಸರಿ

ಸನು । ರಾರಿಹರು ಸುರ ಗರುಡ ಯಕ್ಷನ । ರೋರಗರ ನೆರವಿಯಲಿ ಎನ್ನಯ । ಸಾರ ಸಿರಿಗೆ ॥೫॥ ಭೂರಿ ಮತ್ಸರ ತಳೆಯುತಸುರರು । ಭಾರಿ ಹೋರಾಡಿಹರು ಹಿಂದಕೆ । ಕ್ರೂರಿಗಳ ಸಂಹರಿಸಿ ಮೆರೆದಿಹೆ ಭೂರಿ ಬಲದಿ ॥೬॥ ಸುಧೆಯನುಂಡಿಹೆ ವೆಮ್ಮ ಕೆಣಕುತ । ಬದುಕಲುಂಟೇ ದುರುಳರ್ಕೈದರೆ । ಸದೆದು ಮೆರೆಯುವೆ ಮೂರು ಲೋಕಗ । ಳಿದಿರೆ ಎನಗೆ ॥೭॥

ಭಾಮಿನಿ

ಎಂದು ನುಡಿದಾ ಸುರಪ ಬಹಳಾ । ನಂದದಲಿ ಮೆರೆದಿರಲು ನಾಕದೊ । ಳಂದು ಭುವಿಯೊಳು ನಡೆದ ಪರಿ ಕೇಳ್ ಕರ್ಬುರಾನ್ವಯದಿ ॥ ಮುಂದೆ ಜನಿಸಿದ ದಾರುಕಾಸುರ । ನಂದು ಶೋಣಿತಪುರವ ಪಾಲಿಸು । ತೊಂದು ದಿನ ಯೋಚಿಸಿದ ತನ್ನಯ ಮನದೊಳಿಂತೆನುತಾ ॥೧॥

ರಾಗ- ಭೈರವಿ -ಝಂಪೆತಾಳ

ಸೃಷ್ಟಿಯಲಿ ಶ್ರೇಷ್ಠರಾವ್ । ಜ್ಯೇಷ್ಠರಾಗಿರೆ ಮೂರು । ಸೃಷ್ಟಿಗಧಿಪರು ಸುರರು ಬರಿದೆ ॥ ಹುಟ್ಟಿ ಫಲವೇನಹುದು ದಿಟ್ಟ ರಕ್ಕಸರನ್ನು । ಕುಟ್ಟಿ ಕೊಂದನು ಹರಿಯು ಹಿಂದೆ ॥೧॥ ಪರಮೇಷ್ಠಿಯನು ಭಜಿಸಿ । ವರವ ಪಡೆಯುವೆನಿಂದು । ಸುರರ ಬಡಿದೋಡಿಸುವೆ ಬರಲು ॥ ಹರಿಹರಾದಿಗಳನ್ನು ಬಡಿದು ಕರ್ಬುರರೇಳ್ಗೆ ಮೆರೆಸದಿರೆ ದಾರುಕಾಸುರನೆ ॥೨॥ ಎಂದು ಪೊರಟೈತಂದು । ಪಂಚಾಗ್ನಿ ಮಧ್ಯದಲಿ । ನಿಂದು ಸಾವಿರ ವರ್ಷ ತಪದಿ ॥ ಮುಂದೆ ತನ್ನಯ ತಲೆಯ । ಸಂದುಗಳಚುವ ಯತ್ನ । ಹೊಂದಿರಲು ವೈದೋರಿ ಅಜನು ॥೩॥ ಏತಕೀ ತೆರದುಗ್ರ ತಪವ ನೀ ಗೈದಿರುವೆ । ಭೀತಿಬಡುತಿದೆ ಲೋಕವೀಗ ॥ ಯಾತುಧಾನನೆ ತಪಕೆ । ಪ್ರೀತನಾಗಿಹೆ ವರವ । ಈ ತತ್‌ಕ್ಷಣ ಕೇಳು ಕೊಡುವೆ ॥೪॥

ರಾಗ- ಕೇತಾರಗೌಳ -ಝಂಪೆತಾಳ

ಎಂದು ವಿಧಿ ನುಡಿಯೆ ಕೇಳ್ದಾ ! ರಕ್ಕಸನು । ವಂದಿಸುತ ನುತಿಸಿ ಪೇಳ್ದಾ । ತಂದೆ ಬೇಕಮರತ್ವವು । ಎನಲಜನು । ಇಂದಿಲ್ಲ ಅಧಿಕಾರವು ॥೧॥ ಕೇಳುತಿದನಸುರನೆಂದ । ಚಕ್ರ ದಯ । ಪಾಲಿಸದ ಧರಿಸಿ ನಿಂದ ॥ ಮೇಲೆನಗೆ ಸಾವು ಸೋಲು ॥ ಬರದಂತೆ । ಪಾಲಿಪುದು ವರವೀಗಳು ॥೨॥ ಮಾತೆ-ಪಿತರಿದ್ದವರಲಿ। ಮತ್ತೆ ತ್ರೈ । ಮೂರ್ತಿಗಳ ಆಯುಧದಲಿ ॥ ಚ್ಯುತಿಯೊದಗಬಾರದೆನುತಾ ।

ಬೇಡೆ ವಿಧಿ । ವ್ಯತಿ ಚಕ್ರದಿಂದಲೆನುತಾ ॥೩॥

ರಾಗ– ಮಾರವಿ –ಏಕತಾಳ

ತೆರಳಲು ವಿಧಿಯಾ ಕರ್ಬುರನಾಕ್ಷಣ । ಧರಿಸುತ ಚಕ್ರವನು ॥ ನೆರಹುತ ಸೇನೆಯ ಪೊರಟನು ದಿಗ್ದೇ । ಶ್ವರರನು ಗೆಲುವುದಕೆ ॥೧॥ ಕೆಳಗಿನ ಲೋಕಗ ಳೆಲ್ಲವ ಜಯಿಸಿದ ತಳೆದತಿ ತೋಷವನು ॥ ಇಳೆಯಧಿಪಾಲರ ಕೆಣಕುತ ಸೋಲಿಸಿ । ಸೆಳೆದನು ಜಯ ವಧುವ ॥೨॥ ಕಿನ್ನರ ಕಿಂಪುರುಷರ ಗರುಡಾದಿ । ಗಳುನ್ನತ ರೋಷದಲಿ ॥ ಹಣ್ಣಿದು ಸೋಲನ್ನುಣ್ಣಲು ತೋಷದೊ । ಳುನ್ನತ ವಿಕ್ರಮದಿ ॥೩॥ ನಾಕವ ಮುತ್ತಿದನಾ ಕಾವಲ ಭಟ । ರಾ ಕೊಳುಗುಳ ತೋರಿ॥ ನಾಕಾಧಿಪಗೆರಗುತಲಾಗೊರೆದರು । ರಾಕ್ಷಸರಾಗಮವ ॥೪॥

ಭಾಮಿನಿ

ಕೇಳಿ ಚಾರರ ನುಡಿಯ ಸುರಪತಿ । ತಾಳಿಯಚ್ಚರಿ ಬಂದನೇ ಖಳ । ಕೋಳುಗೊಂಬೆನೆನುತ್ತ ಚಾರರಿಗಭಯವಿತ್ತಾಗ ॥ ಮೇಳವಿಸಿ ಸೇನೆಯನು ವರ ದಿಗು । ಪಾಲರಿಂದೊಡಗೂಡಿ ಕದನಕೆ । ಕಾಲಭೈರವನಂತೆ ಬಂದನು ಅನಲ ರೋಷದಲಿ ॥೧॥

ರಾಗ– ಶಂಕರಾಭರಣ –ಮಟ್ಟೆತಾಳ

ಎಲವೊ ಧೂರ್ತ ಯಾರು ನೀನು । ಕಲಹಕೇಕೆ ಬಂದೆ ಪೇಳು । ತೊಲಗ ದಿರಲು ಕೊಲುವೆನೀಗ । ಛಲವದೇಕೆಲೊ ॥೧॥ ಶೋಣಿತೇಶ ದಾರುಕಾಖ್ಯ । ಕ್ಷೋಣಿ ಮೂರ ಗೆಲಲು ಬಂದೆ । ತ್ರಾಣವಿರಲು ತೋರು ನಿನ್ನ । ಪೆಸರದೇನೆಲಾ ॥೨॥ ಮೂರು ಲೋಕ ಸುಡಲು ಬಲ್ಲ । ವೀರನಗ್ನಿಯೆನ್ನ ಮುಖದಿ । ಭೂರಿ ಯಜ್ಞಗೈದು ಪಡೆವರಷ್ಟಸಂಪದ ॥೩॥ ಅಗ್ನಿ ನಿನ್ನ ವಿಕ್ರಮಗಳ । ಭಗ್ನಗೊಳಿಪೆ ನೋಡು ವ್ಯತ್ಯ । ಲಗ್ನಗೈವೆನೆನುತಲೆಚ್ಚ । ಕೂರ್ಗಣೆಗಳನು ॥೪॥ ಎಚ್ಚ ಶರವತರಿಯುತಗ್ನಿ । ಕಿಚ್ಚ ಕಾರಿ ಬಲವ ಸುಡಲು । ಬೆಚ್ಚದೆಸೆಯೆ ಚಕ್ರವನ್ನು । ಪೃಥ್ವಿಗೊರಗಲು ॥೫॥

ರಾಗ– ಭೈರವಿ –ಅಷ್ಟತಾಳ

ದುರುಳ ಕರ್ಬುರನೆ ನೀನು । ನಾಕವನೇರಿ । ಸುರರ ಕಂಗೆಡಿಪುದೇನು ॥ ಧುರದೊಳಗ್ನಿಯ ಗೆಲ್ದ । ಪರಿಯಲ್ಲ ಮಾರುತ । ನುರವಣೆಯೇನ ಬಲ್ಲೆ ॥೧॥

ಬಲ್ಲೆ ನಾನೆಲ್ಲವನ್ನು । ಆ ದಶಾನನ । ಸಲ್ಲಿ ಗುಡಿಸಿ ಇಹುದನ್ನು ॥ ಖುಲ್ಲ ಸುರಾಧಮ ಸ್ವರ್ಗದಿ ಮೆರೆವಿರಿ । ಕೊಲ್ಲುತ ಸೂರೆಗೊಂಬೆ ॥೨॥ ಸುಧೆಯ ಪಾನವಗೈದಿರೆ । ಸಾವೆಮಗೀಗ । ಒದಗಲಾರದು ಬಂದಿರೆ ॥ ಮದಮುಖರಸುರರ । ಸದೆಯುತ ಮೆರೆದೆವು ಒಡಲುರಿ ನಿನಗೇತಕೊ ॥೩॥ ಮೋಸ ವಂಚನೆ ಕೃತ್ಯದಿ । ಗೆದ್ದಿರಿ ನಮ್ಮ । ದೋಷಕಾರಿಗಳ್ ವ್ಯರ್ಥದಿ ॥ ಏಸು ಕಾಳಗ ಗೈಯೆ । ವೀಸ ಫಲವು ಬಾರ । ದಾಶುಗ ತೊಲಗೆಲವೊ ॥೪॥ ಎಸೆದ ಕಣೆಗಳನು ತರಿದು । ಶೂಲದೊಳಿಡೆ । ಹಸಿದ ಹುಲಿಯು ತೆರ ಮೊರೆದು ॥ ಅಸುರನೊಳ್ ಪರಿಪರಿ । ಹೆಣಗುತಲೊರಗಲು । ವಸುಧೆಯೊಳಿಂದ್ರ ನೋಡಿ ॥೫॥

ರಾಗ– ಭೈರವಿ –ಏಕತಾಳ

ಧಡಿಗ ಖಳಾಧಮ ಕೇಳು । ಹೊಡೆ । ದಾಡುವ ಪರಿಯೇಂ ಪೇಳು ॥ ಪೊಡವಿಯದಾವುದು ನಿನ್ನ । ಕಡಿ । ದೀಡಾಡುವೆ ಶಿರವನ್ನ ॥೧॥ ಜಾರದಿರೆಲೊ ಸುರಪಾಲ । ನಾ । ದಾರುಕ ಶೋಣಿತಪುರಪಾಲ ॥ ತೋರಲು ವಿಕ್ರಮುವನ್ನ । ಅಸು । ಹೀರುವೆ ನಿಲ್ಲೆಲೊ ನಿನ್ನ ॥೨॥ ಶಂಬರ ಪಾಕಾದಿಗಳು । ರಣ । ವಂಬಯಸುತ ನರಕಗಳು ॥ ತುಂಬಿದ ರೀತಿಯನರಿಯೊ । ಗೆಲು ! ವೆಂಬಾಸೆಯನೀ ತೊರೆಯೊ ॥೩॥ ವಂಚಿತಸುರರ ಗೆಲಿದೆ । ಏ । ರಂಚಿಯೆ ಬರಲೀ ಹವದೆ ॥ ಮಿಂಚಿನ ಆಯುಧ ಫಲವೇ । ರಣ । ಸಂಚಲಿಸಲು ನಾ ಕೊಲುವೆ ॥೪॥ ಗಳಹದಿರೆಲೊ ಕರ್ಬುರನೆ । ತವ । ಗಳ ತುಂಡರಿವೆನು ಖಳನೆ ॥ ಛಲಬಲವೇತಕೆ ವ್ಯರ್ಥ । ಕೊಳು । ಗುಳದಲಿ ಸಾವೆಯ ಧೂರ್ತಾ ॥೫॥ ದುರುಳರೆ ನಿಮ್ಮಯ ಧುರವ । ನಾ । ವರಿತಿಹೆ ಬ್ರಹ್ಮನ ವರವ ॥ ಧರಿಸುತ ಬಂದಿಹೆನೀಗ । ನಾ । ನರಿಯುವೆ ಶರಣೆನು ಬೇಗ ॥೬॥

ಭಾಮಿನಿ

ಒರೆಯುತೀ ಪರಿ ಚಕ್ರವೆತ್ತಲು । ಸುರಪ ಸೋತೋಡಿದನು ಕರ್ಬುರ । ರೆರೆಯ ಜಯಭೇರಿಯನು ಹೊಡೆಸುತ ಬಂದನರಮನೆಗೆ ॥ ಪರಿಪರಿಯ ಮರುಗುತ್ತ ಸುರ ಪಡೆ । ವೆರಸಿ ವೈಕುಂಠಕ್ಕೆ ತೆರಳುತ । ಸಿರಿಯರಸನನು ನುತಿಸೆ ವೈದೋರಲ್ಕೆ ಪದಕೆರಗೆ ॥೧॥

ರಾಗ– ಭೈರವಿ –ಝಂಪೆತಾಳ

ಏನು ಬಂದಿಹೆ ಸುರಪ । ಆನನವು ಕಂದಿಹುದಿ । ದೇನು ಕಷ್ಟಗಳೊದಗಿ

ತೆಂದು ॥ ಮಾನವಂತನೆ ಸ್ವರ್ಗ । ವೇನು ತ್ಯಜಿಸುತ ಬಂದೆ । ಸಾನುರಾಗದಿ ಪೇಳು ಎನಲೆಂದ ಸುರಪ ॥೧॥

ರಾಗ– ಶಂಕರಾಭರಣ –ಆದಿತಾಳ

ಶ್ರೀ ರಮಣೀಧವಾ । ದೇವರದೇವಾ ॥ ಸಾರಸಾಕ್ಷನೆ ಬೀರೊ ಕೇಶವ ದಯುವ ॥ಪ॥ ಅಮರಾವತಿಯೊಳಿಂದು ಅಸುರರಟ್ಟುಳಿದೇವ । ಸುಮನಸರೆಲ್ಲರು ಸೋತೊರಗಿದರಯ್ಯ॥ ಶ್ರೀರಮಣೀ ॥೧॥ ದಾರುಕಾಸುರ ಬಂದು ಬೀರೆ ಭಯುವ ನಿಂದು । ಸಾರಿದೆ ನಾನಿಲ್ಲಿ । ಕಾರುಣ್ಯ ಸಿಂಧು ॥ ಶ್ರೀ ರಮಣೀ ॥೨॥

ರಾಗ– ನವರೋಜು –ಆದಿತಾಳ

ಸುರಪತಿಯೆಂದುದ ಕೇಳಿ । ನಗು । ತೊರೆದ ಹರಿ ಮುದ ತಾಳಿ ॥ ತೊರೆ ಯುತಭಯುವನು । ತೆರಳಿರಿ ಈಗಲೆ । ಬರುವೆನು ದುರುಳನ ಸಂಹರಿಸುವೆನು ॥೧॥ ಗರುಡನನೇರುತ ಬಂದು । ಪುರ । ಹೊರವಳಯದಲಿ ನಿಂದು ॥ ಕರದೊಳ ಗಿರುತಿಹ ಶಂಖವನೂದಲು । ಧುರಹಂಕಾರದೊಳೈದಿದ ಖಳಪತಿ ॥೨॥

ರಾಗ– ಭೈರವಿ –ಏಕತಾಳ

ಬಂದೆಯು ಕದನಕೆ ಹರಿಯೆ । ನೀ । ನಿಂದಿರು ಎನ್ನಯ ಪರಿಯೇ ॥ ನೆಂದರಿತಿಹೆ ತಾಳೆಲವೊ । ಪು । ರಂದರ ಸೋತೋಡಿದ ಕೇಳು ॥೧॥ ರಕ್ಕಸ ಕುಲಕೆ ಕುಠಾರ । ನಾ । ಲೆಕ್ಕವೆ ನೀನೆಲೊ ಶೂರಾ ॥ ದಕ್ಕಳು ಜಯಸಿರಿ ನಿನಗೆ। ಪಾ । ದಕ್ಕೆರಗಲೊ ಖಳ ಸಾರ್ದೆ ॥೨॥ ಹಿಂದಕೆ ಖಳರನು ರಣದಿ । ನೀ । ಕೊಂದಿಹ ಕಾರಣ ಛಲದಿ ॥ ಕೊಂದಪೆನೀಗಲೆ ನಿನ್ನ । ಜತೆ । ಹೊಂದಿಪೆ ನೋಡವರನ್ನ ॥೩॥

ರಾಗ– ಘಂಟಾರವ –ಏಕತಾಳ

ಎಂದ ಮಾತಿಗೆ ಹರಿಯು ಭೋರ್ಗರೆಯುತ್ತ । ಕಂದುಗಳನಂದದಲಿ ಶರ ಗಳ । ವೃಂದವನೆ ತಾ ಸುರಿದನು ॥೧॥ ತಂಡತಂಡದಿ ಬರುತಿರ್ಪ ಶರಗಳ । ಖಂಡಿಸುತ ಖಳನಾಗ ರೋಷದಿ । ಹಿಂಡುಗಣೆಗಳ ತೂರಿದ ॥೨॥ ಭಳಿರೆ ಭಾಪುರೆ! ತಾಳು ತಾಳೆನುತಲಿ । ನಳಿನಲೋಚನ ಕಡಿದು ಕೆಡಹಿದ । ಖಳನ ಹಸ್ತದ ಚಾಪವ ॥೩॥ ಸಾರೆಲೋ ಹರಿ ನೋಡು ಎನ್ನಯ ಚಕ್ರ । ತೋರಿಪಡೆ ವಿಕ್ರಮವನೆನ್ನಲಿ । ಸಾರಿ ಕೊರಳನ್ನರಿವೆನು ॥೪॥

ಭಾಮಿನಿ

ಘೋರ ರಕ್ಕಸನಿಂತು ನುಡಿಯಲು । ಸಾರಸಾಕ್ಷನು ತಿಳಿದ ತನ್ನೊಳು । ತೀರದಾಹವ ವಿಧಿಯ ವರದಲಿ ಮರಣವಿಲ್ಲವಗೆ ॥ ತೋರದಡಗಲ್ಕಾಗ ರಕ್ಕಸ । ಭೂರಿ ಸಂತೋಷದಲಿ ಮರಳಿದ । ಸೇರಿ ವೈಕುಂಠವನು ಯೋಚಿಸಿ ನುಡಿದ ನಿಂತೆನುತ ॥೧॥

ರಾಗ– ಮುಖಾರಿ –ಅಷ್ಟತಾಳ

ಏನು ಮಾಡಿಬಿಟ್ಟ ವಿಧಿಯು । ದಾನವನಿಗೆ ವರವನಿತ್ತು । ತಾನೆ ಕೆಡಿಸಿ ಬಿಟ್ಟ ಲೋಕ ಹಾನಿಯೊದಗಿತಲ್ಲವೆ ॥೧॥ ದುಷ್ಟ ಶಿಕ್ಷೆ ಶಿಷ್ಟ ರಕ್ಷೆ । ಶ್ರೇಷ್ಠ ಧರ್ಮಕೆಲ್ಲಿ ಗತಿಯು । ದುಷ್ಟನವನ ಕೊಲುವುದೆಂತು । ಸೃಷ್ಟಿ ಹಾಳುಗೈವುದೆ ॥೨॥

ವಾರ್ಧಕ

ಇನಿತು ಹರಿ ಯೋಚಿಸುತ ಮನದಿ ಕೊರಗುತಲಿರಲು । ಕಣುಗಳಿಂದೇಳ್ಬಂದು ತೊಡೆಗುದುರಲಾಕ್ಷಣವೆ । ಜನಿಸಿದರ್ ಏಳ್ಮಂದಿ ಜಲದುರ್ಗೆಯರ ಕಂಡು ಅತ್ಯಂತ ಹರುಷ ತಾಳಿ ॥ ಅನಿಬರಂ ಭಗವತೀ ಪರಮೇಶ್ವರೀ ರಾಜ-ರಾಜೇಶಿ । ವಿನುತನ್ನ ಪೂರ್ಣೇಶಿ ಭ್ರಮರಾಂಬೆ ಕಾತ್ಯಾಯ್ನಿ । ವನಿತೆ ರಕ್ತೇಶ್ವರಿಗಳೆಂದು ಕರೆಯಲು ಕೇಳ್ದರಾ ಹರಿಯ ಮೊಗ ನೋಡುತಾ ॥೧॥

ರಾಗ– ಮುಖಾರಿ –ಅಷ್ಟತಾಳ

ಏನಿದೂ ತಾತ ಏನಿದು ॥ಪ॥ ಏನಿದು ತಾತ ನಿಮ್ಮಯ ಮೋರೆಯಿಂದು। ಶಾನೆ ಕಂದಿಹುದೇಕೆ ಬಂತೇನು ಕುಂದು ॥ಅಪ॥ ಸತ್ಯ ಧರ್ಮವೆ ಸೃಷ್ಟಿಗಾಧಾರವೆಂದು । ಸತ್ವಗುಣಾಯುತ ನೀನಿರಲಿಂದು ॥ ಸತ್ಯಲೋಕಾಧಿಪ ಸ್ವಜಿಸನೆ ಇಂದು । ಕೃತ್ತಿವಾಸನು ಲಯಗೈಯನೆ ಮುಂದೆ ॥ಏನಿದು॥೧॥

ಕ್ಷೋಣಿಯೊಳಗೆ ವರ್ಣಾಶ್ರಮವು । ಕ್ಷೀಣವಾಯ್ತೆ ಜಗದ ಶಾಂತಿ । ಕಾಣದಿಂತು ವ್ಯಥಿಪೆಯೇನು । ಮಾಣದೆಮ್ಮ ಕೂಡೆ ಪೇಳು ॥೧॥ ವೇದ ಮಾರ್ಗ ತೊರೆದು ಜನರು ಭೇದ ಬುದ್ಧಿಯಲ್ಲಿ ನಡೆದು । ಖೇದಗೊಳಿಸಿ ಇಹರೆ ದೇವ । ಹೇ ದಯಾಮಯುಸುರು ಬೇಗ ॥೨॥ ಧರ್ಮ ಕರ್ಮ ತ್ಯಜಿಸಿ ಜನರ । ಧರ್ಮಕಾರ್ಯನಿರತರೆನಿಸಿ । ದುರ್ಮದಾಂಧರಿಂದಲೀಗ । ಉರ್ವಿ ಕೆಟ್ಟಿತೆಂದು

ವ್ಯಥೆಯೆ ||೩|| ಹೋಮ-ಯಜ್ಞ ದಾನ-ಧರ್ಮ ನೇಮ-ನಿಷ್ಠೆ ತ್ಯಜಿಸಿ ಜನರು | ಕಾಮ-ಕ್ರೋಧ-ಲೋಭ-ಮೋಹ | ನಿರತರಾದರೆಂದು ವ್ಯಥೆಯೆ ||೪|| ಹಸಿವೆ ನಿದ್ರೆ ತೃಷೆಯ ಮರೆತು | ವಸತಿ ಪತ್ನಿ-ಸುತರ ತೊರೆದು | ಉಸಿರ ತಡೆದು ತಪವ ಗೈವ | ಋಷಿಗಳಿಂದು ಮರುಗುತಿಹರೆ ||೫|| ಅಮರ ಭಾಗ್ಯಗಳನು ಕಂಡು | ದುರ್ಮದಾಂಧರಸುರವರ್ಗ | ಸಮರಗೈದು ಸ್ವರ್ಗ ಜಯಿಪ | ಸಮಯ ಒದಗಿತೆಂದು ವ್ಯಥೆಯೆ ||೬||

ರಾಗ– ಕೇತಾರಗೌಳ –ಝಂಪೆತಾಳ

ತನುಜೆಯರ ನುಡಿ ಕೇಳುತ | ಹರಿ ನುಡಿದ | ವನಿತೆಯರ ಮುಡಿ ಸವರುತ || ದನುಜ ದಾರುಕನ ಕಥೆಯ | ಅದರಿಂದ | ತನಗೊದಗಿ ಇರುವ ವ್ಯಥೆಯ ||೧|| ತೆರಳಿ ಶೋಣಿತದ ಪುರಿಗೆ | ನೀವವನ | ತರಿದು ಬಹುದೆಮ್ಮ ಬಳಿಗೆ || ಪರಿಪರಿಯ ಆಯುಧಗಳ | ಕೈಗೊಳುತ | ತೆರಳಿರೆನೆ ಹರಿಗೆರಗುತಾ ||೨|| ಲಾಲಿಸೈ ದೇವ ನಾವು ನಿನ್ನಾಜ್ಞೆ | ಪಾಲಿಪೆವು ಎಮಗೆ ನೀನು || ಪಾಲಿಪುದು ದಿವ್ಯ ಶಕ್ತಿ | ರಕ್ಕಸನ | ಕಾಲಗೊಪ್ಪಿಸುವ ಯುಕ್ತಿ ||೩|| ವಿಧಿಯೊಳ್ ಪಡೆದಿಹ ಚಕ್ರವ | ವಂಚಿಸುತ | ಚದುರತೆಯೊಳ್ ಗೈದು ಧುರವ || ಮುದಮುಖನ ಗೆಲಿದು ಬೇಗ | ಬನ್ನಿರೆಂ | ದೊದಗಿಸುತ ವರ ಹರಸಲಾಗ ||೪||

ಭಾಮಿನಿ

ಹರಿಯು ಕರುಣಿಸೆ | ಶಕ್ತಿ-ಯುಕ್ತಿಯ | ತರುಣಿಯರು ಬರಲಿತ್ತ ಭುವಿಯಲಿ | ಹರನ ಗಣ ಗುಳಿಗಾಖ್ಯ ಧರ್ಮವ ಬೋಧಿಸುತ ಬಳಲಿ || ಶಿರವ ಘಟ್ಟದೊಳಿಟ್ಟು ಪಾದವ ಶರಧಿಯಲಿ ನೀಡಾಡಿ ಮಲಗಿರೆ | ತರುಣಿಯರು ಎಬ್ಬಿಸಲು ಕ್ರೋಧದೊಳೆಂದನವ ಕನಲಿ ||೧||

ರಾಗ– ಸೌರಾಷ್ಟ್ರ –ತ್ರಿವುಡೆತಾಳ

ಏನಿರೌ ನೀವಾರು ನಿದ್ದೆಗೆ | ಹಾನಿಯೊದಗಿಸಿ ಕೆಟ್ಟಿರಲ ಅನು | ಮಾನವೇತಕೆ ನಿಮ್ಮನೀಗಲೆ | ಶರಧಿಗಿಡುವೆ ||೧|| ಏನೆಲವೊ ನೀನಾರು ದಾರಿಯೊ | ಳೇನು ಕಾರಣ ಮಲಗಿ ನಿದ್ರಿಪು | ದೇನು ನಿನ್ನನು ಕೇಳ್ವರಿಲ್ಲವೆ | ಪೇಳ್ವುದೀಗ ||೨|| ಹರನ ಗಣ ಗುಳಿಗಾಖ್ಯ ಲೋಕದಿ | ಪರಮ ಸತ್ಯವ ಧರ್ಮ ಬೋಧಿಸಿ| ಪರಮ ಆಯಾಸದಲಿ ಮಲಗಿಹೆ | ಯಾರು ನೀವು ||೩|| ದುರುಳ ದಾರುಕನನ್ನು

ತರಿಯಲು ! ಹರಿಯ ನೇಮನ ಹೊಂದಿ ಬಂದೆವು । ಬರುವೆಯಾದಡೆ ರಕ್ತ ದೌತಣ । ಪಡೆಯಬಹುದು ॥೪॥

ಕಂದ

ಎಂದೆನೆ ಕೇಳ್ದಾ ಗುಳಿಗಂ । ಬಂದೊಡಗೂಡುತಲವರಂ ಶೋಣಿತ ಪುರಕಂ ॥ ಬಂದಾಗಲೆ ಭಗವತಿ ತಾ । ನೆಂದಳು ನಿಲ್ಲಿರಿ ತರುವೆನು ಚಕ್ರವ ನೆನುತಂ ॥೧॥

ರಾಗ– ಸಾಂಗತ್ಯ –ರೂಪಕತಾಳ

ಬಳಿದು ವಿಭೂತಿಯ ತಲೆಯ ಜಟೆಯ ಕೊರ । ಳೊಳು ಮಾಲೆ ರುದ್ರಾಕ್ಷಿಯ ॥ ಸಲೆ ದಂಡಕಮಂಡಲುಟ್ಟ ಕಾವಿಯ ಬಟ್ಟೆ । ತಳೆದು ಮುದುಕಿ ವೇಷವ ॥೧॥ ಬರೆ ಭಗವತಿಯನು ರಾಜದ್ವಾರದಿ ಪೊಗ । ದಿರು ಎಂದು ತಡೆಯಲ್ಕೆ ಚರರು ॥ ಬರಿದೇಕೆ ತಡೆವಿರಿ ತಿರುಕಿಯು ನಾ ನಿಮ್ಮ । ದೊರೆಯನು ಕಾಣ ಬಂದಿಹೆನು ॥೨॥ ದೊರೆಯ ಅಪ್ಪಣೆಯಿಂದ ಒಳಬಿಡೆ ಬಂದಳು । ಹರಸಿದಳಸುರೇಂದ್ರಗೆ ॥ ಆರುಹು ನೀನಾರೆಂಬುದೆಲ್ಲಿಂದ ಬಂದಿಹ । ಪರಿಗಳನುಸುರೀಗಲೆನಲು ॥೩॥ ಅಸುರೇಂದ್ರ ಲಾಲಿಸೈ ಹಿಂದೆ ನಿನ್ನಯ ತಾಯ । ಬಸುರಿಂದ ಬರ್ಾಗಲು॥ ಎಸೆವ ಮೊಲೆಯ ಹಾಲನಿತ್ತು ಸಾಕಿದೆ ನಾನು । ಪುಸಿಯಲ್ಲ ನಿನ್ನಾಣೆ ನಿಜವು ॥೪॥ ಅನ್ನವಿಲ್ಲದೆ ಮೂರು ದಿನಗಳಾಯಿತು ಕಂದ । ಉಣ್ಣುವಾಶೆಯೊಳೀಗ ಬಂದೆ ॥ ತಿನ್ನಲಿಲ್ಲದೆ ನಿನ್ನ ರಾಜ್ಯದೊಳ್ ಸತ್ತರೆ । ಉನ್ನತ ಅಪಕೀರ್ತಿಬಹುದು ॥೫॥

ರಾಗ– ನಾದನಾಮಕ್ರಿಯೆ –ಏಕತಾಳ

ಎಂದ ನುಡಿಯ ಕೇಳುತಸುರ । ನೆಂದ ಸಂಧ್ಯಾಕಾರ್ಯಕೆನುತ । ನಿಂದೆ ನಿಲ್ಲಿ ಪೋಗು ಎನ್ನ ಮಡದಿಯಿಾವಳು ॥೧॥ ಅನ್ನ ನೀಡದಿರಲು ರಾಣಿ । ಎನಗೆ ತಿಳುಹೆ ಕರೆದು ಪೇಳ್ವೆ । ಎನಲು ಪೊರಟು ಷೋಢಶಾಬ್ದ ತರುಣಿಯಾಗುತಾ ॥೨॥ ಬಂದು ರಾಜಭವನ ಪೊಕ್ಕು । ಸುಂದರಾಂಗಿ ರಂಭಾಮಣಿಯ । ನಂದು ಕಾಣಲವಳು ಕೇಳ್ದ । ಳಂದು ತೋಷದಿ ॥೩॥

ರಾಗ– ಮೋಹನ –ಅಷ್ಟತಾಳ

ಯಾರಮ್ಮ ನೀರೆ ನೀನು । ಅಪ್ಸರೆಯಸುರ । ನಾರಿಯೇನೆಂಬುದನ್ನು ॥ ಆರು ನಿನ್ನನು ಪೆತ್ತ । ರ್ಯಾರ ಸತಿಯು ಬಂದ । ಕಾರಣವಾರುಹೆನ್ನೊಳು ॥೧॥

ಎಂದೆನುತ ಸಂತವಿಸಿ । ತಾವ್ । ಬಂದ ನಾವೆಯೊಳ್ ನೆಲಸೀ ॥ ಚಂದದೊ ಳ್ಗುಳಿಗನು ನಾವೆಯ ನಡೆಸಲು । ಮುಂದಕೆ ಉತ್ತರಕೈದಿತು ನಾವೆಯು ॥೨॥

ರಾಗ- ಸೌರಾಷ್ಟ್ರ -ತ್ರಿವುಡೆತಾಳ

ನೀಲಕಂಠನು ಧ್ವಜದಿ ನೆಲಸಿದ । ಆಳು ಗುಳಿಗನು ನಾವೆ ನಡೆಸಿದ । ಏಳು ದುರ್ಗೆಯರ್ ಧರ್ಮಪಾಲಕ । ರ್ಮೇಲೆ ನೆಲಸೆ ॥೧॥ ಸಾರಿ ಬರುತಿರೆ ಶರಧಿ ಮಧ್ಯದಿ । ಮೂರನೆಯ ಅವತಾರಕುದಿಸಿದ । ಭೂರಿಬಲದ ವರಾಹ ನೆಲ ಸಿದು । ದೂರದಿಂದ ॥೨॥ ತೋರುತಿರೆ ಬಲು ನಾವೆಯನು ತಾ । ಸೂರೆಗೊಂಬೆ ನೆನುತ್ತ ತ್ವರಿತದಿ । ನೀರ ಸೀಳುತ ಬಂದನಬ್ಬರ । ತೋರುತಾಗ ॥೩॥ ಪ್ರಳಯ ಕಾಲವೊ ಶರಧಿಯುಕ್ಕಿತೊ । ತಳವುಳವಿದೇನೆನುತಲಚ್ಚರಿ । ತಳೆದಿರಲು ಬಂದಾ ವರಾಹನು । ತಡೆಯುತೆಂದಾ ॥೪॥ ನಿಲ್ಲಿರೆಲವೊ ನಾವೆಯಿದಕೊಂಡೆಲ್ಲಿಗೈದುವಿ ರಹಹ ನಿಮ್ಮನು । ಕೊಲ್ಲುತೀಗಲೆ ಭಕ್ಷಿಸುವೆ ನಾ । ನೆಲ್ಲರನ್ನು ॥೫॥

ರಾಗ- ಶಂಕರಾಭರಣ -ಮಟ್ಟೆತಾಳ

ಪೂತು ಮಝರೆ ಎನುತ ಗುಳಿಗ । ಖಾತಿಯಿಂದ ಶೂಲ ಪಿಡಿದು । ಭೀತಿಗೊಳಿಪನಾರು ಕೊಲುವೆ । ನೀ ತತೂಕ್ಷಣ ॥೧॥ ಭಳಿರೆ ಭೂವರಾಹ ಪುತ್ರ ಜಲವರಾಹನೆಂಬರೆನ್ನ । ಛಲವ ತೋರೆ ನಿಮ್ಮನೆಲ್ಲ । ಮೆಲುವೆ ನೋಡೆಲಾ ॥೨॥ ಹರಿಯು ಸುತೆಯರೇಳು ಮಂದಿ । ಹರನ ಗಣನು ಗುಳಿಗ ನಾನು । ಶರಧಿ ಚರಿಪ ನಮ್ಮ ತಡೆಯೆ । ತರಿವೆ ನಿನ್ನನು ॥೩॥ ಹರಿಯು ಹರನ ಪೆಸರು ಪೇಳೆ । ತೆರಳ ಲಾರೆ ಕೇಳು ಭೂತ । ವರನೆ ಮೆಲುವೆ ನೋಡು ಎನ್ನ ತೆರೆದ ಬಾಯನು ॥೪॥ ತಿನಲು ಕೇನೆ ಕೆಸುವೆ ಹಂದಿ । ರಣದಿ ಒಡಲ ಸೀಳಿ ಭೂತ । ಗಣಕೆ ಔತಣ ಗಳ ಮಾಳ್ಪೆ । ತೆರಳು ಬೇಗನೆ ॥೫॥ ಭರದೊಳುಭಯ ವೀರರಾಗ ಭರಿತ ವೀರಾ ವೇಶದಿಂದ । ಧುರವ ಗೈಯೆ ಗುಳಿಗ ಧರೆಯೊ । ಳೊರಗೆ ಕಾಣುತಾ ॥೬॥

ರಾಗ- ಭೈರವಿ -ಏಕತಾಳ

ಪರಮೇಶ್ವರಿಯುದ ನೋಡಿ । ಬಹು । ಶರಗಳ ಧನುವಿಗೆ ಪೂಡಿ ॥ ಧಿರುರೆ ವರಾಹನೆ ಬೇಗ । ಕೊರ । ಳರಿವೆನು ನೀ ತೊಲಗೀಗ ॥೧॥ ಹೆಣ್ಣಿಗೆ ಧುರವೇ ಕೆಲವೊ । ಫಲ । ವುಣ್ಣುವೆ ನೀ ತೊಲಗೆಲವೊ ॥ ಗಣ್ಯವೆ ನೀವಿಂದೆನಗೆ । ಕೊಲೆ । ಪೆಣ್ಣಿಂದಂಜುವೆ ಮೇಗೆ ॥೨॥ ಬಿಡು ಬಿಡು ಬಡಿವಾರವನು । ನೀ ತೊಡ

ಗೆನ್ನೊಳು ಸಮರವನು ॥ ಧಡಿಗನು ದಾರುಕನನ್ನು । ನಾವ್ । ಮಡುಹಿದ ಪರಿ ತಿಳಿ ನೀನು ॥೩॥ ಜಲದಿ ವರಾಹಗೆ ಜನಿಸಿ । ಇಹೆ । ಬಲದಿ ಮಹಾಕಲಿ ಸಹಸಿ ॥ ಜಲದಲಿ ಚಲಿಸುವಿರೇಕೆ । ಕಡು । ಛಲಗಳ ನಿಲಿಸುವೆ ಜೋಕೆ ॥೪॥ ಮೇಲೆ ವರಾಹನು ನೆಗೆಯೆ । ಎರ । ಡಾಲಿಯೊಳ್ಕೆಂಡಗಳ್ ಸುರಿಯೆ ॥ ಶೂಲದಿ ಪರಮೇಶ್ವರಿಯೂ । ತಿವಿ । ಯೋಳಿತು ರುಧಿರದ ನೊರೆಯೂ ॥೫॥

ಭಾಮಿನಿ

ರಣದಿ ವೈಮರೆದೊರಗ ತೇಳುತ । ಕಣುದಣಿಯೆ ನೀಕ್ಷಿಸಿದನವರನು । ಹಣೆಯು ಚಾಚಿದು ತಾಯೆ ರಕ್ಷಿಸು ಬೇಹುದೆನ್ನುವನು ॥ ಮಣಿದು ನುತಿ ವರಾಹ ಕಾತ್ಯಾ । ಯಿನಿಯು ಪೇಳ್ದಳು ಗುಳಿಗನಿಗೆ ಎರ । ಡನೆಯ ನಾವಿಕ ನಾಗೆ ಕೊಡಿಸುವೆ ಕೋಲ ಭೋಗಗಳ ॥೧॥

ರಾಗ– ಪಂಚಾಗತಿ –ಮಟ್ಟೆತಾಳ

ಎನಲು ಕೇಳುತ । ತೋಷ ತಾಳುತ ॥ ಘನ ವರಾಹನು ನಾವೆಯೇ ರ್ದನು ॥ ಇನಿತು ನಾವೆಯು ಮುಂದೆ ಸರಿಯಿತು । ವನದಿ ವಸನವು ತೀರ ದಾಯಿತು ॥೧॥ ದೇವಿ ಭಗವತಿ ಕರೆದು ಕೇಳಲು । ನಾವೆ ಭೂಮಿಗೆ ದೂರ ವೆನ್ನಲು ॥ ಭಾವಭಕ್ತಿಯೊಳ್ ಗುಳಿಗ ಸತ್ಯದಿ । ನಾವೆ ಹತ್ತಿರವೆನಲು ಕೋಪದಿ ॥೨॥ ಶಿರದಿ ಪಿಡಿಯುತ ದೂರಕೆಸೆದಳು । ತಿರುಗುತುರುಳಿದ ಘಟ್ಟದೆಡೆಯಲಿ ॥ ಮರುಗಿ ಬೇಡಲು । ಜನರು ನಂಬಲೀ ಕರೆದು ಬಲಿಯನು ಕೊಡಲಿ ಪಂಜುರ್ಲಿ ॥೩॥ ಕಳೆದು ಮಲೆಯಳ ಕಾಸರ್ಗೋಡನು । ಬಳಿಕ ಉಪ್ಪಳ ಉಳ್ಳಾಲಡ್ಕವ ॥ ಉಳಿದು ಕುದ್ರೋಳಿ । ಯಲ್ಲಿ ಕೂಟದಿ ॥ ಬಳಿಕ ಸೇರ್ದರು ಚಿತ್ರಾಪುರವನು ॥೪॥

ರಾಗ– ಕೇತಾರಗೌಳ –ಅಷ್ಟತಾಳ

ವರ ಚಿತ್ರಾಪುರದಲ್ಲಿ ಕಿರಿಯ ದೇವಿಯು ನಿಲೆ । ಭರದಿ ಮುಂದಕೆ ಬಂದರು॥ ವರ ಸಸಿಹಿತ್ತಿಲ ಸೇರುತಲಲ್ಲಿನ । ನೆರಳಲ್ಲಿ ಕುಳಿತಿರಲು ॥೧॥ ತೋಟದಣ್ಣಯ ನೆಂಬ ಮಲೆಯಾಳಿ ಬಿಲ್ಲವ । ನೂಟವ ಮುಗಿಸಿಕೊಂಡು ॥ ನೋಟಯ ಬೀ ಳ್ಕೊಂಡು ಮುರ್ತೆಗೆ ಬರುತಿರೆ । ತೋಟದಲಿಹರ ಕಂಡು ॥೨॥ ಯಾರವ್ವ ನೀವೆಲ್ಲ ರಿಲ್ಲೇನು ಕುಳಿತಿರಿ । ತೋರುವ ನಾವೆಯದು ॥ ಯಾರದು ನೀವೆಲ್ಲಿ ಗೈದುವಿರೆನೆ ದೇವಿ । ತೋರುತೆಂದಳು ದಯವ ॥೩॥ ಕೇಳಯ್ಯ ತೋಟದಣ್ಣಯನೆಂಬವನೆ

ಈಗ । ತಾಳಲಾರೆವು ತೃಷೆಯ ॥ ಮೇಲೇರುತೀಗಲೆ ಸೀಯಾಳ ಕೊಡಿಸಯ್ಯ । ಮೇಲಪ್ಪುದಯ್ಯ ಮುಂದೆ ॥೪॥

ವಾರ್ಧಕ

ಹತ್ತಿಳಿದು ಮರದಿಂದ ಎಳನೀರುಗಳ ತೆಗೆದು । ಕೆತ್ತಿಕೊಡೆ ತೂತಾದುದೊಂದ ಭಗವತಿ ಕುಡಿಯೆ । ಮತ್ತವರು ಬಲು ಹೇಸಿ ತೆಗೆಳಲೆಂದಳು ಭಕ್ತನಿತ್ತುದುವೆ ಪರಿಶುದ್ಧಿಯು ॥ ನಿತ್ಯವೆನು ನಾನಿಲ್ಲಿ ಮುಂದೆ ಪೋಗುತ ನೀವು । ಭಕ್ತರನ್ನುದ್ಧರಿಸಿರೆನೆ ಗುಳಿಗ ನೆಲಸಿದನು । ಮತ್ತುಳಿದರೆಲ್ಲವರು ಮುಂದೆ ಸಾರುತ ಮೂಲ್ಕಿ ಶಾಂಭವಿಯ ನಡುವೆ ನೆಲಸೆ ॥೧॥

ರಾಗ– ಸೌರಾಷ್ಟ್ರ –ತ್ರಿವುಡೆತಾಳ

ಇತ್ತ ಕೇಳೈ ಬಪ್ಪಬ್ಯಾರಿಯು । ಪಶ್ಚಿಮೊಡ ಮಲಬಾರ ತ್ಯಜಿಸುತ । ಉತ್ತಮದ ಮೂಲಿಕೆಯೊಳ್ನೆಲಸಿದ । ಸ್ವಸವಾಗಿ ॥೧॥ ದೂರದೇಶಗಳೊಡನೆ ಬಹು ವ್ಯಾಪಾರ ಮಾಡುತ ನಾವೆ ಕಟ್ಟಿಸಿ । ಭಾರಿ ವೈಭವದಿಂದ ಮೆರೆದನ । ಪಾರ ಸುಗುಣಿ ॥೨॥ ಧೀರ ಉಸ್ಮಾನ್ ಕೇತ. ಮೂಲ್ಯ । ರಪಾರ ಸಾಹಸಿ ನಾವಿಕರು ಸಹ । ಸೇರಿ ಬಪ್ಪನು ನಾವೆಗೊಂದಿನ । ಹೇರಿ ಸರಕ ॥೩॥ ತೆರಳಿ ತನ್ನಯ ವೇಶ್ಯೆ ಚೆನ್ನಿಯ । ಕರೆದು ತಿಳಿಸಿದ ಮಕ್ಕ-ಮದಿನಕೆ । ತೆರಳಿ ಬಹೆ ನಾನೀಗ ಲೆನ್ನುತ । ಲೊರೆದು ಬಳಿಕಾ ॥೪॥ ಸರಸಸಲ್ಲಾಪದಲಿ ಸುಖಿಸಿದ । ನಿರುಳು ಕಳೆಯಲು ಬಂದು ಸತಿ-ಸುತ । ರ್ಗೊರೆದು ಬುದ್ಧಿಯ ಪೊರಟನತ್ತ್ಯಾ । ತುರದಿ ಬ್ಯಾರಿ ॥೫॥ ಮಕ್ಕ-ಮದಿನದ ಯಾತ್ರೆಗೆನುತಲಿ । ಮಿಕ್ಕಿದುತ್ಸಾಹದಲಿ ಪೊರಟರೆ । ಫಕ್ಕನೇ ನದಿ ನಡುವೆ ನಾವೆಯು । ಸಿಕ್ಕಿ ನಿಲಲು ॥೬॥ ಅರರೆ ಏನಾಶ್ಚರ್ಯವೆನ್ನುತ । ಪರಿಕಿಸಲು ನೀರೆಲ್ಲ ರಕ್ತದ । ಪರಿಯ ತೋರಲು ಬೆದರಿ ಬಪ್ಪನು । ಒರೆದನಿಂತು ॥೭॥ ಯಾವ ದೈವವೊ ಭೂತ ತಡೆದಿಹ । ನಾವೆಯನು ಬಿಡಬೇಕು ಇಷ್ಟವ । ಭಾವಭಕ್ತಿಯೊಳೊದಗಿಪೆನ್ನಲು ದೇವಿಯಾಗಾ ॥೮॥

ಭಾಮಿನಿ

ಅಷ್ಟಭುಜ ಪರಮೇಶ್ವರಿಯು ತಾ । ದೃಷ್ಟಿಗೋಚರಳಾಗಿ ನುಡಿದಳು । ಸೃಷ್ಟಿಗೊಂದೇ ದೈವ ನಂಬಿಕೊ ರೂಪ ಬೇರ್ಬೇರೆ ॥ ಕಟ್ಟಿಸೈ ದೇವಾಲಯುವ ಪ್ರತಿಷ್ಠಿಸೈ ನಿಮ್ಮವನು ಕಾವೆನು । ಇಷ್ಟಸಂಪದವಿತ್ತು ಮಾಳ್ಪೆನು ಪೆಸರ । ಚಿರ

ಸ್ಥಾಯಿ ||೧|| ಮೂಲಿಕೆಯು ಒಂಬತ್ತು ಮಾಗಣೆ | ಪಾಲಿಸುವ ಸಾವಂತ ನೆಲ ಕೊಡು | ವಾಲಯದಿ ಬೈಲುಡುಪ ಪೂಜಿಸೆ ಪಾಲಿಸುತಲಿರುವೆ ||

ರಾಗ– ನವರೋಜು –ಆದಿತಾಳ

ದೇವಿಯಿಂತೆನೆ ಬ್ಯಾರಿ | ತಾ | ಸಾವಂತರೆಡೆ ಸಾರಿ || ದೇವಿಯು ಅಪ್ಪಣೆ ವಿವರಿಸಲಾತನು ! ತೀವಿದ ತೋಷದಿ ಕರೆಸಿದನುಡುಪರ ||೧|| ನೆಲ ಜಲ ಆಯು ವನರುಹಿ | ಶುಭ | ಕೆಲಸ ಮುಹೂರ್ತವ ತಿಳುಹಿ || ಚೆಲುವಿನ ಗುಡಿ-ಗೋಪುರ ಗಳ ಕಟ್ಟಿಸೆ | ಬಲು ಸಂಭ್ರಮದಲಿ ನೆಲಸಿದಳ್ದೇವಿಯು ||೨|| ಶ್ರೀ ದುರ್ಗಾಪರ ಮೇಶ್ವ | ರೀ | ಸೋದರಿಯರೊಂದಂಶ || ಕಾದಿರಿಸುತ ತಾವ್ | ಮುಂದಕೆ ತೆರಳುಲ | ಮೋದದಿ ಭಕ್ತರ ಪೊರೆದಳು ದೇವಿಯು ||೩||

ರಾಗ– ಸೌರಾಷ್ಟ್ರ –ಆದಿತಾಳ

ಮೂಲಿಕಾ ಮಾಗಣೆ ಬಪ್ಪನಾಡೆನಿಸಲಿ ಕೇಳಿರಯ್ಯ || ನೀ ವಿ | ಶಾಲ ಬುದ್ಧಿಯ ತೋರಿ ಭಕ್ತಿಯೊಳ್ನಡೆಯಿರಿ | ಕೇಳಿರಯ್ಯ ||೧|| ಧರ್ಮಪಾಲಕ ಕ್ಷೇತ್ರಪಾಲನಾಗುವನಿಲ್ಲಿ | ಕೇಳಿರಯ್ಯ || ಧರ್ಮ | ಕರ್ಮದಿ ನೀವ್ನಡೆದರೆ ನಿಮ್ಮ ಸಲಹುವೆ | ಕೇಳಿರಯ್ಯ ||೨|| ನಿಷ್ಠೆ-ಭಕ್ತಿಯೊಳೆನ್ನ ಅರ್ಚಿಸೆ ಭಕ್ತರ | ಕೇಳಿರಯ್ಯ || ಮನ | ದಿಷ್ಟವ ಸಲಿಸುತ ನಿತ್ಯದಿ ಪೊರೆಯುವೆ | ಕೇಳಿರಯ್ಯ||೩||

ಕಂದ

ಇಂತುಸುರುತ್ತಲೆ ದೇವಿಯು| ಅಂತರ್ಧಾನದಿ ನೆಲಸಿರಲೋರುವ ರಜಕಂ|| ಪಂಥದಿ ಬ್ಯಾರಿಯು ದೇವಿಗೆ| ನಾಂ ತಲೆಬಾಗೆನು ಎನುತಲೆ ನಿಂದಿಸಲಾಗಂ||೧||

ರಾಗ– ನಾದನಾಮಕ್ರಿಯೆ –ಏಕತಾಳ

ಅಡಗಿ ಪೋಗೆ ವಾಕ್ಯಕ್ತಿಗಳು | ನಡುಗಿ ಮಡದಿ ಮಕ್ಕಳೆಲ್ಲ | ಒಡತಿ ದೇವಿ ಬಳಿಗೆ ಅವನ | ಹಿಡಿದು ತಂದರು ||೧|| ದೇವಿ ಪದಕೆ ಕೆಡಹುತವನ | ಭಾವ-ಭಕ್ತಿಯಿಂದ ಬೇಡೆ | ದೇವಿ ಗಂಧ ತೊಡೆಯೆ ಸುಖದಿ ಜೀವಿಸಿರ್ದನು ||೨|| .

ಭಾಮಿನಿ

ದೇವಿಯೊಂದಿನ ಧರ್ಮಪಾಲನ | ಭಾವನೆಯ ಪರಿಕಿಸುವೆನೆಂದೆನು | ತಾ ವಿಲಾನಿಸಿಯಂತೆ ಶಾಂಭವಿ ದಡದಿ ತಿರುಗುತಿರೆ || ಈ ವಿಚಾರವನರಿಯದಾ

ಕ್ಷಣ । ದೇವನಾಗಿಹ ಧರ್ಮಪಾಲಕ । ನಾವಿರ್ಭಸುತ ನುಡಿದನಾಕೆಯ ಕಾಣು ತಿಂತೆನುತಾ ॥೧॥

ರಾಗ– ಕೇತಾರಗೌಳ –ಅಷ್ಟತಾಳ

ಆರು ನೀನೆಲೆ ನೀರೆ ಸಾರಿದುದೇಕಿಲ್ಲಿ । ಸೂರಿಯ ನಡಗುತಿಹಾ । ಕಾರುಗತ್ತಲೆ ಮುಂದೆ ಸೇರಿಕೊ ಗೃಹವನು । ಸಾರಿದೆ ತೆರಳು ನೀನು ॥೧॥ ಊರ ಮೇಲಿನ ಅಧಿಕಾರ ಕೊಟ್ಟವರ್‍ಯಾರು । ಪೋರ ನಿನ್ನಯ ಪೆಸರೇನು ॥ ಭೂರಿ ಕೊಬ್ಬಿನ ಮಾತು । ತೋರ್ಪೆ ಬೂಟಾಟಿಕೆ । ಯಾರೊಡನುಸುರುತಿಹೆ ॥೨॥ ದೇವಿಯ ಕ್ಷೇತ್ರದಿ ಕ್ಷೇತ್ರಪಾಲಕನಹೆ । ದುರ್ವಿಚಾರಕೆ ಎಡೆಯ ॥ ನಾವು ನೀಡುವರಲ್ಲ । ಧರ್ಮವಿದಲ್ಲವು । ಹೇವ ನಾರಿಗೆ ಭೂಷಣ ॥೩॥ ಕ್ಷಿತಿಯ ಜನರು ಎನ್ನ ಸುತರೆಂದು ತಿಳಿದಿಹೆ । ಮತಿಯಿಲ್ಲವೇನೋ ಬಾಲಾ ॥ ಸುತ ನೀನು ಮಾತೆಗೆ ಬುದ್ಧಿಯೊರೆವೆಯಲ್ಲ । ಹಿತವಲ್ಲವೈ ತೆರಳು ॥೪॥ ಏನೆಂದೆ ನಾರಿ ನೀ ಎನ್ನನು ಸುತನೆಂದು । ಹೀನೈಸಿ ನುಡಿದೆಯಲ್ಲ ॥ ನೀನೀಗ ತೆರಳದೆ ಪೋದೆ ಯಾದಡೆ ಫಲ । ಕಾಣಿಸಿಕೊಡುವೆ ನೋಡು ॥೫॥ ಪೋರ ನಿನ್ನಯ ನುಡಿ ವಿಾರಿತು ಎನ್ನೊಳು । ತೋರಲಹಂಕೃತಿಯ ॥ ತೋರುವ ನದಿಯೊಳು ಮುಳುಗಿಸುತೆಸೆಯುವೆ । ತೋರುವ ಗಿರಿಯಾಚೆಗೆ ॥೬॥

ರಾಗ– ಭೈರವಿ –ಏಕತಾಳ

ಛಳಛಳರೆಲೆ ಬಡ ನಾರಿ । ಏನ್ । ತಿಳಿದಿಹೆ ಎನ್ನ ಬಜಾರಿ ॥ ಸೆಳೆಯುತ ನಾಲಿಗೆಯರಿವೆ । ಕರು । ಳೆಳೆಯುತ ನೆತ್ತರ ವಿಾವೆ ॥೧॥ ಗಿರಿಯನು ನೊಣ ನುಂಗುವುದೆ । ಬಹು । ಉರಿಯಲಿ ತೃಣ ಉಳಿಯುವುದೆ ॥ ತರಳನೆ ಹೆಮ್ಮೆಯ ದೇಕೆ । ನೀ । ತೆರಳುತ ಬದುಕೆಲೊ ಜೋಕೆ ॥೨॥

ಭಾಮಿನಿ

ಇನಿತು ನಾನಾ ಪರಿಯೊಳು ನಿಂದಿಸಿ । ರಣವ ಗೈಯುತ ಕರೆದು ಪೇಳ್ದಳು । ಅಣುಗ ಮೆಚ್ಚಿದೆ ಬೇಡು ವರವೆನೆ ಕೆರಳುತಾಕ್ಷಣದಿ ॥ ಮಣಿವೆನೇ ನಾನಿಂದು ಬೇಡಿಕೊ । ಮನದ ಇಷ್ಟಾರ್ಥವನು ಸಲಿಸುವೆ । ನೆನಲು ಸೇವಕ ನಾಗಿ ಗೃಹವನು ಪಾಲಿಸೆನಲವನು ॥೧॥

ರಾಗ– ಆನಂದ –ಅಷ್ಟತಾಳ

ಏನ ಮಾಡಲಯ್ಯೊ ಹರಿಯೆ । ಮಾನವಳಿಗೆ ದಾಸನೆನಿಸಿ । ಇರುವೆನೇ ।

ಬಾಳ ! ತೊರೆವೆನೇ ||೧|| ದೇವನೆಂಬ ಹೆಮ್ಮೆಯಿಂದ | ನಾ ವಿರೋಧಿಯೊಡನೆ ನುಡಿದು ! ದಾಸ್ಯವೇ | ಅಪ | ಹಾಸ್ಯವೇ ||೨|| ಹರಿಯು ಮಾತಿಗಾಗಿ ಬಂದು | ಪರಮ ದೇವಿಗಾಗಿ ನಿಂದು | ಆಯಿತೇ | ಮಾನ | ಹೋಯಿತೇ ||೩||

ಭಾಮಿನಿ

ಇಂತು ಮರುಗುವ ಧರ್ಮಪಾಲನ | ಮುಂತೆ ಪರಮೇಶ್ವರಿಯು ಕಾಣಿಸಿ | ಆಂತ್ಯವಿಲ್ಲದ ಪ್ರೇಮದಿಂ ತೆಗೆದೆತ್ತಿ ಮೈದಡವಿ || ಸಂತಸವ ತಾಳೆಂದೆನು ಮಗನೇ | ಕಿಂತು ದುಃಖಿಪೆ ನಿನ್ನ ಪರಿಕಿಸ | ಲಿಂತುಗೈದೆನು ಬೇಸರಿಸದಿರು ಬಾರೆನುತ ಕರೆ ದೊಯ್ಯೆ ||೧||

ರಾಗ- ಶಂಕರಾಭರಣ -ಮಟ್ಟೆತಾಳ

ಪ್ರೇತ ಹಿಡಿದ ನಾರಿಯೋರ್ವಳ್ | ಭೀತಿಗೊಳಿಸಲವಳ ಪತಿಯು | ಕಾತರಿಸುತ ದೇವಿಯೆಡೆಗೆ ಕರೆದು ತಂದನು ||೧|| ಆರುಭಟಿಸಿ ಗಾರುಗೆಡಿಸೆ | ಸಾರಿಯುಡಪರಾಗ ತೀರ್ಥ | ನಾರಿಗೆರಚೆ ಕೂಗಿ ಪ್ರೇತ | ಬಿಡುತಲೋಡಿತು ||೨||

ರಾಗ- ಸೌರಾಷ್ಟ್ರ -ತ್ರಿವುಡೆ

ಒಂದು ದಿನದಲಿ ಕೋಟಿ-ಚೆನ್ನಯ | ರೊಂದುಗೂಡುತ ಬರಲು ಕಡ ವಿನೊ | ಳಂದು ನೆಲಸಿಹ ಕರಿಯ ತಡೆಯುತ | ಲೆಂದನಾಗ ||೧|| ನಿಲ್ಲಿರೈ ನೀವಾರು ಪೋಗುವ | ದೆಲ್ಲಿ ಬಾರೆಯರಾಜ್ಞೆ ಪಡೆಯದೆ | ಮಲ್ಲಸಾಹಸ ತೋರ ಲಾಗದು | ಖುಲ್ಲರಂತೆ ||೨|| ಕರೆದು ತಾ ಬಾರೆಯರನೀಗಲೆ | ಧರೆಯ ವೀರರು ಕೋಟಿ ಚೆನ್ನಯ | ಭರದಿ ಬಂದಿಹರೆಂದು ಅರುಹುತ | ಕರೆದುತಹುದು ||೩|| ಬಂದು ಬಾರೆಯರಿಂಗೆ ಎರಗುತ | ಲಂದು ವಿವರಿಸಲುಭಯ ವೀರರು | ಹೊಂದಿ ಯಾನಂದವನು ತ್ವರಿತದಿ | ಬಂದರಾಗ ||೪||

ರಾಗ- ಕೇತಾರಗೌಳ -ಅಷ್ಟತಾಳ

ಕಾರಣಿಕರೆ ನಮಸ್ಕಾರ ನಿಮಗೆ ಮೈಯ | ತೋರಿದ ಕಾರಣವ || ತೋರಿ ದಯವ ನೀವು ಪೇಳಬೇಕೆಂಪೆನೆ | ಮಾರಿ ಸಂತೋಷದಲ್ಲಿ ||೧|| ನಾಲುಕು ದಿಕ್ಕಿನೊಳೂರೊಳು ತುಂಬಿವೆ | ಸಾಲಾಗಿ ಗರಡಿಗಳು || ಮೂಲಿಕೆಯೊಳು ನಮಗಿಲ್ಲವೈ ಗರಡಿಯು | ಲೀಲೆಯೊಳ್ ಕೊಡಿಸಬೇಕು ||೨||

ರಾಗ– ಸೌರಾಷ್ಟ್ರ –ಮಟ್ಟೆತಾಳ

ಆಗದಾಗದಿಂಥ ಮಾತು । ಸಾಗದಯ್ಯ ಮೂಲಿಕೆಯೊಳು । ಒಪ್ಪಲಾರ ರಿಂದ ಸೂಚನೆ ।೧॥ ನಂಬಿದವರ ಸುಖದಿ ಸಲಹಿ । ಕೊಂಬ ಬಿರುದ ಪಡೆದ ದೈವ । ಎಂಬುದರಿತು ಗರಡಿ ಕಟ್ಟಿಕೊಂಬುದುಚಿತವು ॥೨॥ ಮೂಲಿಕೆಯ ಹೊರಗೆ ನಾವು ಕಾಲನಿಕ್ಕಲಾರೆ ನೀವು । ಮೂಲಿಕೆಯೊಳು ನೆಲಸಲೆಳಸಲಾಗ ದೆನುವೆವು ॥೩॥ ಸಾಮದಿಂದಲೊಪ್ಪದಿರಲು । ಸಾಮರ್ಥ್ಯದಿ ಗೆಲಿದು ನಮ್ಮ ಕಾಮಿತವನು ಪಡೆದುಕೊಂಬೆ । ಯಾರು ತಡೆವರು ॥೪॥ ಹೆಮ್ಮೆ ಮಾತ ನಾಡಿಯಲ್ಯಾಕೆ । ಸುಮ್ಮನೈದಲೊಳಿತು ಬಂದೆ । ಎಮ್ಮ ಕೆಣಕೆ ಅಳಿಸಿಬಿಡುವೆ । ನಿಮ್ಮ ಕೀರ್ತಿಯ ॥೫॥

ರಾಗ– ಭೈರವಿ –ಅಷ್ಟತಾಳ

ಬುದ್ಧಿವಂತನ ಕೊಂದೆವು । ಎನ್ನುನು ಕೊಲ । ಲಿದ್ದ ರಾಜನ ಮಾರ್ದೆವು॥ ಇದ್ದ ನಾಡನು ಬಿಟ್ಟು । ಗುದ್ದಿ ರಕ್ಕಸನನ್ನು । ಗೆದ್ದಿಹ ವೀರರಾವು ॥೨॥

ರಾಗ– ಮಾರವಿ –ಏಕತಾಳ

ಹೋಬಳಿ ಕಟ್ಟನು ಮುರಿಯುತ ಮದುವೆಯ । ಸಾಧಿಸಿ ತೋರಿದೆವು ॥ ಕಾದಲು ಬಂದಿಹ ಕೊಂಡೆಯನಳಿದುಳಿದೋಡಿ ಕುಬೇರಾಖ್ಯ ॥೧॥

ರಾಗ– ಭೈರವಿ –ಅಷ್ಟತಾಳ

ಭಾರಿ ಕೋಟೆಯು ಕಟ್ಟಿದ । ಅದರೊಳು ನಮ್ಮ । ತೂರಿ ವಂಚನೆಯೊ ಟ್ಟಿದ ॥ ತೋರಿದು ಸಾಹಸ । ಕೋಟೆಯ ಮುರಿದಿಕ್ಕಿ । ಹಾರಿಹೋದೆವು ದೂರಕೆ ॥೧॥

ರಾಗ– ಮಾರವಿ –ಏಕತಾಳ

ಗಟ್ಟದ ಸೀಮೆಯು ಸೇರುತ ಗೌಡರ । ಜಟ್ಟಿಗಳನೆ ತರಿದು ॥ ತಟ್ಟನೆ ಗೌಡನ ತಲೆಯೊಳು ಕಪ್ಪವ । ಇಟ್ಟೆಳತಂದಿಹೆವು ॥೧॥

ರಾಗ– ಭೈರವಿ –ಅಷ್ಟತಾಳ

ಬೇಟೆಗಾರರನೋಡಿಸಿ । ಯುದ್ಧಕೆ ಬಂದ । ರಾಟವ ನಾವ್ ನಿಲ್ಲಿಸಿ ॥ ಮಾಟನಿಸಿಹ ಚಂದುಗಿಡಿ ಮೊದಲಾಗಿಹ । ಭಟರನು ಕೊಂದಿಹೆವು ॥೧॥

ರಾಗ– ಮಾರವಿ –ಏಕತಾಳ

ಸೇವಂತೂರಿನ ರಾಜಗೆ ಅ । ರಮನೆ ನಾವು ವಿಚಾರಿಸುತ ॥ ಬಾವದ ಗುತ್ತಿನ ಗಡಿಗಳ ಮಾಡಿದೆ । ವಾವೊಂದೇ ದಿನದಿ ॥೧॥ ಬಿಡು ಬಿಡು ಮಹಿಮೆಯ ನುಡಿಗಳ ತೌಳವ । ಪೊಡವಿಯು ಜನರೆಲ್ಲ ॥ ತೊಡಗಿಹರ್ಪೂಜೆಗೆ । ನಡುಗುವವರ್ಮನಿಸಿಗೆ । ಕೆಡುವಿರಿ ಫಡಮರುಳೆ ॥೨॥ ಒಂದೇ ರಾತ್ರಿಯೊಳ್ಗೈದೆವು ಗದ್ದೆಗಳ್ತಂದೆವು ನೀರನೆರೆ ॥ ಒಂದೇ ರಾತ್ರಿಯೊಳ್ಕಂಬಳ ನೆಡುವುದು । ಸಂಧಿಸೆ ಕೆಡುವಿರಿದೋ ॥೩॥

ಭಾಮಿನಿ

ಮಾಯಕಾರಿಗಳಿಂತು ನಾಲ್ವರು । ಸಾಯಕವ ಹಿಡಿದೆತ್ತಿ ಹೆಣಗಲು । ತೋಯಜಾಂಬಕಿ ದೇವಿ ಕಾಣುತಲಾಗ ವ್ಯೆದೋರೆ ॥ ಸಾಯಕವ ಬಿಸುಟಾಗ ನಾಲ್ವರು । ತಾಯೆ ಬಪ್ಪಾನಾಡ ದುರ್ಗಿಯೆ । ಕಾಯಬೇಕೆಂದೆನುತಲೆರಗಲು ನುಡಿದಳಾ ದೇವಿ ॥೧॥

ರಾಗ– ನವರೋಜು –ಆದಿತಾಳ

ವೀರರಿರಾ ಲಾಲಿಸಿರಿ । ತುಳು । ಧಾರಿಣಿಯು ಪಾಲಿಸಿರಿ ॥ ಕಾರಣಿಕರು ನೀವಾಗಿರುತೀ ಪರಿ । ತೋರುವ ಛಲ ಕಾದಾಡುವುದೇನಿದು ॥೧॥ ಮೂಲಿಕೆಯ ಮಾಗಣೆಯ । ಇವರ್ । ಪಾಲಿಸಲೀ ಉಳಿದೆಡೆಯ ॥ ತಾಳುತ ಸಂತಸ ಮಾಯದೊಳ್ನೆಲಸಿರಿ । ಮೇಲಕೆಯೊಂದಿನ ವೆಚ್ಚವ ಕಳುಹುವೆ ॥೨॥ ದೇವಿಯ ಈ ನುಡಿ ಕೇಳಿ । ಭ । ಕ್ತಾವಳಿಯು ಮುದ ತಾಳಿ ॥ ನೀ ವಿಧಿಸಿದ ತೆರ ನಡೆದಪೆವೆನುತಲಿ । ಭಾವದೊಳ್ನಮಿಸಲು ಅಡಗಿದಳ್ದೇವಿಯು ॥೩॥

ಭಾಮಿನಿ

ಕಾಂತ ಚೆನ್ನಯ ಕೋಟಿ ಬುದರ । ತ್ಯಂತ ತೋಷದಿ ತೆರಳಲಿತ್ತಲು । ಮುಂತೆ ನಡೆದಿಹ ಕಥೆಯು ಕೇಳ್ವುದು ಮೂಲ್ಕಿ ಮಾಗಣೆಯು ॥

ವಾರ್ಧಕ

ಚೇಳಾರು ಗುತ್ತಿನೊಳ್ ದುಗ್ಗ ಎಂಬವಳಿಂಗೆ । ಬಾಲಕರು ಬದುಕದಿರೆ ಬಪ್ಪನಾಡಿಗೆ ಬಂದು । ಹೇಳಿಕೊಂಡಿರೆ ಪರಕೆಯುದಿಸಿದವ ಮಂಜಣ್ಣನೆಂಬ ಪೆಸರಿಂದ ಬೆಳೆದ ॥ ಆಳಂಗದಲಿಯುವಗೆ ಜೋಡಿಲ್ಲವೆನಿಸಿರಲು । ಆಳು ತನಿಯನ

ಕೂಡಿ ದೇವಿ ದರ್ಶನ ಮಾಡಿ । ಕೇಳಿದನು ತನ್ನಿಂದಲೇಂ ಸೇವೆ ಬೇಕೆನಲು ಉಡುಪರೆಂದರು ತೋಷದಿ ॥೧॥

ರಾಗ– ಸುರುಟಿ –ಏಕತಾಳ

ಲಾಲಿಸು ಮಂಜಣನೆ । ನಿನ್ನೊಳು ಪೇಳುವ ನುಡಿಗಳನೆ ॥ ಆಲಯದಿದಿರಿನ ತೋಡಿಗೆ ಸಂಕವ । ಮೇಲಾದ ಶಿಲೆಯಿಂದ ರಚಿಸುವುದಲ್ಲದೆ ॥೧॥ ನೋಡದೊ ಧ್ವಜಸ್ತಂಭ । ಕಲ್ಲವು ಜೋಡಿನ ಶಿಲೆಕಂಭ ॥ ಬೇಡುವೆವಿದನೀನೊದಗಿಸಬೇಕೆನೆ। ನೀಡಿ ಪ್ರಸಾದವನೆನುತಲೆ ಪೊರಟನು ॥೨॥ ತೋರಿತು ಮನಕಂದು । ಎರ್ಮಾಳೂರಿನ ತೇರಿಂದು ॥ ಸಾರುತಲಲ್ಲಿನ ಯುವಕರ ಸೋಲಿಸಿ । ಭಾರಿಯ ದಂಬೆಯ ನಿಲ್ಲಿಗೆ ತರುವೆನು ॥೩॥ ತವಕದಿ ಬರಲಿತ್ತ । ಅಲ್ಲಿನ । ಯುವಕರು ಸೇರುತ್ತಾ ॥ ಬಹು ಭಾರದ ಶಿಲೆಯೆತ್ತಲು ಯತ್ನಿಸಿ । ಬವಣೆಯ ಪಡುತಿರ । ಲವರನು ಸರಿಸುತ ॥೪॥ ಎತ್ತಿದ ಕ್ಷಣದಿ ಶಿಲೆ । ಕಂಡಳು । ಕುತ್ತಲೆ ಯುವಕರೆದೆ ॥ ತತ್ತರಿಸಿತು ಜನ । ಕಬ್ಬಿನ ಹೊರೆಯಲಿ । ಶಕ್ತಿ ಪರೀಕ್ಷಿಸ । ಲಂತನು ಮೋಸವ ॥೫॥

ಭಾಮಿನಿ

ಹೊರೆಯೊಳಿರಿಸಿದ ಸರಳ ಸಹಿತಲಿ । ಮುರಿದು ಅದರಿಂ ಹೊಯ್ಯ ತೊಡಗಿದ । ನರರೆ ಯುವಕರ ಮಾರಿಯಾದನೆನುತ್ತ ಹಿರಿದೋಡೆ ॥ ಭರದಿ ದಂಬೆಯ ಹೊತ್ತು ಹಾಸಿದ । ನರೆಯ ಬಗಲಿಗೆ ತೂರಿ ತಡೆವರ । ಮುರಿಯಲೆನ್ನುತ ಕಲ್ಲ ಕಂಭವ ಧರಿಸಿ ಹೊರವಂಟಾ ॥೧॥ ಬಂದು ದೇವಿಗೆ ನಮಿಸಿ ದಂಬೆಯ । ನಂದು ಕೊಡಿಮರಕಿರಿಸಿದನು ತಾ । ತಂದ ಶಿಲೆಯನು ಹಾಸಿ ಸಂಕವ ಗೈದನೇನೆಂಬೆ॥ ಕಂಡೊಡನೆ ಶತಸೂರ್ಯ ತೇಜದೊ । ಳಂದು ಪರಮೇಶ್ವರಿಯು ಕಾಣಿಸು । ತೆಂದಳಾ ಮಂಜಣಗೆ ನಿನ್ನಯ ಸೇವೆ ಹಿರಿದಾಯ್ತು ॥೨॥

ರಾಗ– ನವರೋಜು –ಆದಿತಾಳ

ಮೆಚ್ಚಿದೆ ಮೆಚ್ಚಿದೆ ಕಂದ । ತವ । ಹೆಚ್ಚಿನ ಸೇವೆಗಳಿಂದ ॥ ಹೆಚ್ಚಲಿ ನಿನ್ನಯ ಕೀರ್ತಿಯು ಜಗದಲಿ । ಮೆಚ್ಚಿನ ಭಕ್ತನೆ ಹೆಚ್ಚಿತು ತೋಷವು ॥೧॥ ಬೆಳೆಯಲಿ ನಿನ್ನಯ ಕುಲವು । ಜಗ । ತಳೆಯಲಿ ಎನ್ನಯ ಒಲವು ॥ ಬಲಿದಿಹ ಭಕ್ತಿಯೊಳ್ಸೇವೆಯನೀಯಲು । ಸಲಿಸುವೆ ಮನದಿಷ್ಟಾರ್ಥಗಳೆಲ್ಲವ ॥೨॥ ಸುರರೆರಚಿ ಹೂಮಳೆಯ । ಜನ । ರರಿಯುತಲೀ ಈ ಇಳೆಯ ॥ ಪೊರೆಯಲು ಅವ

ಅವತರಿಸಿಹ ಶ್ರೀ ದುರ್ಗಾ । ಪರಮೇಶ್ವರಿ ಜಯ ಜಯ ಜಯವೆಂದರು ॥೩॥

ಮಂಗಲಪದ

ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥ ದಾರುಕಾಸುರನನ್ನು ಗಾರುಗೆಡಿಸುತ ಕೊಂದು । ಮೂರು ಲೋಕವ ಕಾವ ದುರ್ಗಾಂಬೆಗೆ ॥ ಕಾರುಣ್ಯದಿಂ ಭಕ್ತರುದ್ಧರಿಸಲು ಬಪ್ಪ । ನಾಡೊಳು ನೆಲಸಿಹ ಪರಮೇಶ್ವರಿಗೆ ॥ ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥೧॥

ಸಂಪೂರ್ಣಂ

ಶ್ರೀ ವಿವೇಕಾನಂದ ಪ್ರೆಸ್, ಮೂಡುಬಿದ್ರಿ.